# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 689 |
| ಉತ್ತರಿಸಬೇಕಾದ ದಿನಾಂಕ | : | 12.07.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪುಣ್ಯಕೋಟಿ ಯೋಜನೆ ಜಾರಿಗಾಗಿ ಇಲ್ಲಿಯವರೆಗೂ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಎಷ್ಟು; ಸರ್ಕಾರೇತರ ಮೂಲಗಳಿಂದ ಕ್ರೂಢೀಕರಿಸಿರುವ ಅನುದಾನ ಎಷ್ಟು; ಈ ಅನುದಾನವನ್ನು ಯಾವ ರೀತಿ ವ್ಯಯ ಮಾಡಲಾಗುತ್ತಿದೆ; (ವಿವರ ನೀಡುವುದು)</td><td>ಪುಣ್ಯಕೋಟಿ ದತ್ತು ಯೋಜನೆ ಅಡಿಯಲ್ಲಿ ನೋಂದಣಿಯಾದ ಗೋಶಾಲೆಗಳಿಗೆ ರಾಜ್ಯ ಸರ್ಕಾರಿ ನೌಕರರು ದೇಣಿಗೆ ರೂಪದಲ್ಲಿ ನೀಡಿರುವ ಹಣದಲ್ಲಿ ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಯ ಗೋಶಾಲೆಗಳಿಗೆ ಕೆಳಕಂಡಂತೆ ಹಣ ನೀಡಲಾಗಿದೆ.
<table>
<tr><th>ಕ್ರ ಸಂ</th><th>ಜಿಲ್ಲೆ</th><th>ಗೋಶಾಲೆಗಳ ಸಂಖ್ಯೆ</th><th>ಸರ್ಕಾರದಿಂದ ಬಿಡುಗಡೆ ಮಾಡಲಾದ ಹಣ</th><th>ಸರ್ಕಾರೇತರ ಮೂಲಗಳಿಂದ</th></tr>
<tr><td>1</td><td>ಕಲಬುರಗಿ</td><td>10</td><td>ರೂ.98,35,540–00</td><td>ರೂ.79,465–00</td></tr>
<tr><td>2</td><td>ಯಾದಗಿರಿ</td><td>2</td><td>ರೂ.25,98,255–00</td><td>ರೂ.53,536–00</td></tr>
<tr><td colspan="3">ಒಟ್ಟು</td><td>ರೂ.1,24,33,795–00</td><td>ರೂ.1,33,001–00</td></tr>
</table>
ಸದರಿ ಹಣವು ಗೋಶಾಲೆಯಲ್ಲಿರುವ ಜಾನುವಾರುಗಳ ಮೇವು ಹಾಗೂ ಅವುಗಳ ನಿರ್ವಹಣೆಗೆ ವ್ಯಯ ಮಾಡಲಾಗುತ್ತದೆ.</td></tr>
<tr><td>ಆ)</td><td>ಸದರಿ ಜಿಲ್ಲೆಗಳ ಯಾವ ಯಾವ ಸ್ಥಳಗಳಲ್ಲಿ ಪುಣ್ಯಕೋಟಿ ಯೋಜನೆಯಡಿ ಗೋಶಾಲೆಗಳನ್ನು ಪ್ರಾರಂಭಿಸಲಾಗಿದೆ; ಈ ಗೋಶಾಲೆಗಳಲ್ಲಿ ಲಭ್ಯವಿರುವ ಸೌಲಭ್ಯಗಳೇನು; (ವಿವರ ನೀಡುವುದು)</td><td>1. ಕಲಬುರಗಿ ಜಿಲ್ಲೆಯಲ್ಲಿ ಕಲಬುರಗಿ ತಾಲ್ಲೂಕು, ಮಿಣಜಿಗಿ ಗ್ರಾಮದಲ್ಲಿ ಸರ್ಕಾರಿ ಗೋಶಾಲೆಯನ್ನು ಪ್ರಾರಂಭಿಸಲಾಗಿದೆ. ಈ ಗೋಶಾಲೆಯಲ್ಲಿ ಜಾನುವಾರು ಕೊಟ್ಟಿಗೆ, ನೀರು, ವಿದ್ಯುತ್, ಮೇವು ಸಂಗ್ರಹಣಾ ಕೊಠಡಿ ಸೌಲಭ್ಯವಿರುತ್ತದೆ.<br>2. ಅ) ಯಾದಗಿರಿ ಜಿಲ್ಲೆಯಲ್ಲಿ ಯಾದಗಿರಿ ತಾಲ್ಲೂಕು, ರಾಚನಹಳ್ಳಿ ಗ್ರಾಮದಲ್ಲಿ ಗೋಶಾಲೆಯನ್ನು ಪ್ರಾರಂಭಿಸಲಾಗಿದೆ. ಈ ಗೋಶಾಲೆಯಲ್ಲಿ ಜಾನುವಾರು ಕೊಟ್ಟಿಗೆ, ನೀರು, ವಿದ್ಯುತ್, ಮೇವು ಸಂಗ್ರಹಣಾ ಕೊಠಡಿ ಸೌಲಭ್ಯವಿರುತ್ತದೆ.<br>ಆ) ಯಾದಗಿರಿ ಜಿಲ್ಲೆ, ಸುರುಪುರ ತಾಲ್ಲೂಕು, ಗುಡಿಯಾಳ ಗ್ರಾಮದಲ್ಲಿನ ಗೋಶಾಲೆಯು ನಿರ್ಮಾಣದ ಹಂತದಲ್ಲಿದೆ.</td></tr>
</table>

ಇ) ಈ ಗೋಶಾಲೆಗಳನ್ನು ನಿರ್ಮಾಣ ಮಾಡಲು ಮತ್ತು ಮೂಲ ಸೌಲಭ್ಯಗಳನ್ನು ಒದಗಿಸಲು ಹಾಗೂ ದಿನನಿತ್ಯದ ಕಾರ್ಯ ಚಟುವಟಿಕೆಗಳಿಗೆ ಅಗತ್ಯವಿರುವ ಅನುದಾನ ಎಷ್ಟು? (ವಿವರ ನೀಡುವುದು)

2021–22 ಹಾಗೂ 2022–23ನೇ ಸಾಲಿನಲ್ಲಿ ಸರ್ಕಾರಿ ಗೋಶಾಲೆಗಳ ನಿರ್ಮಾಣ ಮತ್ತು ನಿರ್ವಹಣೆಗೆ ಬಿಡುಗಡೆ ಮಾಡಿದ ಅನುದಾನದ ವಿವರ.

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಜಿಲ್ಲೆ | 2021–22 ಬಿಡುಗಡೆ ಮಾಡಿದ ಅನುದಾನ | 2022–23 ಬಿಡುಗಡೆ ಮಾಡಿದ ಅನುದಾನ | 2022–23 ನೇ ಸಾಲಿನ 70 ಹೊಸ ಗೋಶಾಲೆ ನಿರ್ಮಾಣಕ್ಕೆ ಬಿಡುಗಡೆ ಮಾಡಿದ ಅನುದಾನ | ಒಟ್ಟು |
|---|---|---|---|---|---|
| 1 | ಕಲಬುರಗಿ | ರೂ.50.00 | ರೂ.50.00 | – | ರೂ.100.00 |
| 2 | ಯಾದಗಿರಿ | ರೂ.50.00 | ರೂ.50.00 | ರೂ.50.00 | ರೂ.150.00 |

ಸರ್ಕಾರಿ ಗೋಶಾಲೆಗಳಲ್ಲಿರುವ ಜಾನುವಾರುಗಳಿಗೆ ಒಣ ಮೇವು/ ಹಸಿರು ಮೇವು ಪೂರೈಕೆ, ಕರುಗಳ ಪಾಲನೆಗಾಗಿ ಹಾಲು ಪೂರೈಕೆ, ಗೋಶಾಲೆಗಳ ನಿರ್ವಹಣೆಗೆ ಕೂಲಿ/ಹೊರಗುತ್ತಿಗೆ ಸಿಬ್ಬಂದಿಗಳ ವೇತನ ವಿದ್ಯುಚ್ಛಕ್ತಿ, ಬಿಲ್ಲುಗಳ ಪಾವತಿ, ಹಾಗೂ ಇತರೆ ವೆಚ್ಚಗಳನ್ನು ಮಾಸಿಕ ಹಾಗೂ ಅಗತ್ಯಕ್ಕನುಗುಣವಾಗಿ ಅನುದಾನ ವ್ಯಯ ಮಾಡಲಾಗುತ್ತಿದೆ.

ಗೋಶಾಲೆಗಳಲ್ಲಿರುವ ಜಾನುವಾರುಗಳಿಗೆ, ಪ್ರತಿ ಜಾನುವಾರುವಿಗೆ ದಿನನಿತ್ಯ (NDRF) ಮಾರ್ಗಸೂಚಿ ಅನ್ವಯ ಪ್ರತಿ ಜಾನುವಾರುವಿಗೆ ಪ್ರತಿ ದಿನಕ್ಕೆ ರೂ.70/– ರಂತೆ ಅನುದಾನ ಭರಿಸಲಾಗುತ್ತದೆ.

**ಇ–ಪಸಂಮೀ 132 ಸಲೆವಿ 2023**

(ಕೆ.ವೆಂಕಟೇಶ್)

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**